# ಇದ್ಯಾವ ನಾಗರಿಕತೆ?

ನಾಗರಿಕ ಸಮಾಜದಲ್ಲಿ ಹಿಂಸೆ, ಪ್ರತೀಕಾರಕ್ಕೆ ಆಸ್ಪದವಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂಥ ಪ್ರಕ್ರಿಯೆಗಳಿಗೆ ಕಿಂಚಿತ್ತೂ ಅವಕಾಶವಿಲ್ಲ. ಕಾನೂನನ್ನು ಕೈಗೆ ತೆಗೆದುಕೊಂಡವರು ಎಷ್ಟೇ ದೊಡ್ಡವರಾದರೂ ಅವರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದು ನಾಗರಿಕ ಸರ್ಕಾರದ ಕರ್ತವ್ಯ.

ನಾಗರಿಕ ಸಮಾಜದಲ್ಲಿ ಹಿಂಸೆಗೆ ಆಸ್ಪದವಿಲ್ಲ. ಪ್ರತೀಕಾರಕ್ಕೂ ಅವಕಾಶವಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಂತೂ ಇಂಥ ಪ್ರಕ್ರಿಯೆಗಳಿಗೆ ಕಿಂಚಿತ್ತೂ ಅವಕಾಶಗಳೇ ಇಲ್ಲ. ಏಕೆಂದರೆ ಇಲ್ಲಿ ಜನರಿಂದಲೇ ಆಯ್ಕೆಯಾದ ಪ್ರತಿನಿಧಿಗಳ ಸರ್ಕಾರವಿದೆ. ಆಡಳಿತ ನಡೆಸುವುದಕ್ಕೆ ಸರ್ಕಾರಿ ಸಿಬ್ಬಂದಿ ಇದ್ದಾರೆ. ಕಾನೂನುಪಾಲನೆಗೆ ಪೊಲೀಸ್ ವ್ಯವಸ್ಥೆ ಇದೆ. ಜನ ಸುರಕ್ಷತೆಯ ಭಾವದಲ್ಲಿ ಇರುವಂತೆ ನೋಡಿಕೊಳ್ಳುವುದೇ ಸರ್ಕಾರದ ಜವಾಬ್ದಾರಿ. ಆದರೆ ಈ ಆದರ್ಶ ಸ್ಥಿತಿ ಎಲ್ಲ ಕಡೆಯೂ ಇದೆ ಎಂದು ಹೇಳಿಕೊಳ್ಳುವುದು ಕಷ್ಟ. ಇದಕ್ಕೆ ಕಾರಣ ನಮ್ಮವರೇ ಅಭಿವೃದ್ಧಿಪಡಿಸಿದ ಆಡಳಿತ ವ್ಯವಸ್ಥೆ. ಜನರಲ್ಲಿ ಭದ್ರತೆಯ ಭಾವ ಮೂಡಿಸಲಾಗದ ಆಡಳಿತದ ಬಗ್ಗೆ ಅವರು ಸಹಜವಾಗಿಯೇ ವಿಶ್ವಾಸ ಕಳೆದುಕೊಳ್ಳುತ್ತಾರೆ. ವಿಶ್ವಾಸ ನಷ್ಟವಾದಾಗ ತಮ್ಮ ಪಾಡನ್ನು ನೋಡಿಕೊಳ್ಳುವುದು ಅನಿವಾರ್ಯವಾಗುತ್ತದೆ. ಇಂಥ ಅನಿವಾರ್ಯತೆ ವಿಪರೀತ ಪರಿಣಾಮಕ್ಕೆ ಆಸ್ಪದ ನೀಡುತ್ತದೆ.

ಆಂಧ್ರ ಪ್ರದೇಶದ ಗಡಿಭಾಗಕ್ಕೆ ಹೊಂದಿಕೊಂಡ ಕೋಲಾರ ಜಿಲ್ಲೆಯ ಕೆಲವು ಗ್ರಾಮಗಳಲ್ಲಿನ ಜನತೆ ಅಭದ್ರತೆಯ ಭಾವ ಅನುಭವಿಸುತ್ತಿರುವುದು ಈಚೆಗೆ ಬಯಲಿಗೆ ಬಂದಿತು. ಚಿಂತಾಮಣಿ ತಾಲೂಕಿನ ಎರಡು ಹಳ್ಳಿಗಳ ಗ್ರಾಮಸ್ಥರು ಊರಿಗೆ ನುಗ್ಗಿದ ಹತ್ತು ಮಂದಿ ಯುವಕರನ್ನು ಕಳ್ಳರೆಂದು ಶಂಕಿಸಿ ಬಡಿದು ಕೊಂದರು. ಸತ್ತ ಯುವಕರೆಲ್ಲ ಕಳ್ಳತನದ ಆರೋಪ ಹೊತ್ತಿದ್ದರು ಎಂದು ನಂತರದ ತನಿಖೆಯಿಂದ ಪೊಲೀಸರು ಹೇಳಿಕೆ ನೀಡಿದ್ದಾರಾದರೂ ಜನರೇ ಮುಂದಾಗಿ ಕಳ್ಳರನ್ನು ಶಿಕ್ಷಿಸ ಹೊರಟ ಕ್ರಮ ಕಾನೂನಿಗೆ ತಕ್ಕುದಲ್ಲ. 'ಕಳ್ಳರನ್ನು ಹಿಡಿಯಲು ಪೊಲೀಸರಿದ್ದಾರೆ, ಅವರಿಗೆ ಶಿಕ್ಷೆ ನೀಡಲು ನ್ಯಾಯಾಲಯಗಳಿವೆ; ಹೀಗಿದ್ದಾಗ ಕಾನೂನನ್ನು ಕೈಗೆ ತೆಗೆದುಕೊಂಡು ಶಿಕ್ಷೆ ನೀಡಿದ್ದು ಶಿಕ್ಷಾರ್ಹ ಅಪರಾಧ' ಎಂದು ಪೊಲೀಸರು ಹಳ್ಳಿಗಳಿಗೆ ನುಗ್ಗಿ ಎಪ್ಪತ್ತಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿ ಕಾನೂನು ಕ್ರಮ ಆರಂಭಿಸಿದ್ದಾರೆ. 'ಹಿಂದೆಲ್ಲ ಹಳ್ಳಿಗೆ ನುಗ್ಗಿದ ಕಳ್ಳರನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದಾಗ ಅವರನ್ನು ಬಿಟ್ಟು ಕಳಿಸಿದ್ದಾರೆ; ಪೊಲೀಸರಿಂದ ಕಳ್ಳರಿಗೆ ಶಿಕ್ಷೆಯಾಗುವ ಬದಲಿಗೆ ರಕ್ಷಣೆಯೇ ಸಿಗುತ್ತಿರುವಾಗ ಕಳ್ಳತನಕ್ಕೆ ಗುರಿಯಾಗುವ ಜನರಿಗೆ ಆಯ್ಕೆಯಾದರೂ ಏನಿದೆ? ತಮ್ಮ ಸ್ವತ್ತು ರಕ್ಷಣೆಗೆ ಅವರು ಕ್ರಮ ಕೈಗೊಳ್ಳಲೇಬೇಕಾಯಿತು– ಎಂಬಂಥ ಸಮರ್ಥನೆಯೂ ಸ್ಥಳೀಯರ ಪರವಾಗಿ ವ್ಯಕ್ತವಾಗಿದೆ. ಪೊಲೀಸರ ನಿಷ್ಕ್ರಿಯತೆ ಹಾಗೂ ಕಳ್ಳರೊಂದಿಗೆ ಹೊಂದಾಣಿಕೆಯ ಆರೋಪಗಳನ್ನು ಸುಲಭವಾಗಿ ತಳ್ಳಿ ಹಾಕುವುದು ಕಷ್ಟ. ಏಕೆಂದರೆ ಪೊಲೀಸ್ ವ್ಯವಸ್ಥೆಯೂ ಹಾಗೆಯೇ ಇದೆ. ನಗರ ಪ್ರದೇಶಗಳ ಆಯಕಟ್ಟಿನ ಠಾಣೆಗಳಿಗೆ ಬರಬೇಕಾದರೆ ಅರ್ಹತೆ, ದಕ್ಷತೆಯಷ್ಟೇ ಪೊಲೀಸ್ ಅಧಿಕಾರಿಗೆ ಮಾನದಂಡವಾಗುವುದಿಲ್ಲ. ಹಣ ಕೊಡಲಾಗದ ಪೊಲೀಸ್ ಸಿಬ್ಬಂದಿ ಆದಾಯ ಮಾಡಿಕೊಳ್ಳುವುದಕ್ಕೆ ಅವಕಾಶವೇ ಇಲ್ಲದ ಬರಡು ಠಾಣೆಗಳಿಗೆ ಹೋಗುವುದು ಅನಿವಾರ್ಯ ಎನ್ನುವ ಪರಿಸ್ಥಿತಿ ಬದಲಾಗಿಲ್ಲ. ಕರ್ನಾಟಕದ ಈಚಿನ ಮೂರು ವರ್ಷಗಳ ಆಡಳಿತ ವ್ಯವಸ್ಥೆಯ ಬಗ್ಗೆ ಅಂತರರಾಷ್ಟ್ರೀಯ ಮಟ್ಟದ 'ಇಕನಾಮಿಸ್ಟ್' ಪತ್ರಿಕೆ 'ಅಲ್ಲಿ ಪ್ರತಿ ವರ್ಗಾವಣೆಗೂ ನಿರ್ದಿಷ್ಟ ದರ ಕೊಡಬೇಕು. ಪ್ರತಿ ಕಾಮಗಾರಿಯಲ್ಲೂ ಶೇಕಡಾವಾರು ಕಮೀಷನ್ ಇದೆ' ಎಂದು ಬಣ್ಣಿಸಿರುವಾಗ ಪೊಲೀಸ್ ಇಲಾಖೆ ಇದಕ್ಕೆ ಅಪವಾದವೆಂದು ಹೇಳುವುದು ಕಷ್ಟ.



ಇಂಥ ವ್ಯವಸ್ಥೆಯಲ್ಲಿ ಜನ 'ಕಳ್ಳರನ್ನು ಪೊಲೀಸರು ಹಿಡಿದುಕೊಂಡು ಹೋಗಿ ಕೋರ್ಟಿಗೆ ಒಪ್ಪಿಸುತ್ತಾರೆ; ಅಲ್ಲಿ ನ್ಯಾಯಾಲಯ ಅವರನ್ನು ತ್ವರಿತವಾಗಿ ವಿಚಾರಣೆಗೆ ಒಳಪಡಿಸಿ ಶಿಕ್ಷೆ ನೀಡುತ್ತದೆ. ಇದರಿಂದ ಕಳ್ಳತನದ ಪಿಡುಗು ನಿಂತು ಹೋಗುತ್ತದೆ' ಎಂದು ವಿಶ್ವಾಸ ತಾಳುತ್ತಾರೆ ಎಂದು ಹೇಳಲಾಗದು. ಪೊಲೀಸರ ನಿಷ್ಕ್ರಿಯತೆ ಮತ್ತು ನ್ಯಾಯ ನಿರ್ಣಯದಲ್ಲಿನ ವಿಳಂಬದ ಕಾರಣ ಜನರಲ್ಲಿ ನಂಬಿಕೆ ಕುಸಿಯುತ್ತದೆ. ಪರಿಣಾಮ ತಾವೇ ಪೊಲೀಸರು ಮತ್ತು ನ್ಯಾಯಾಲಯಗಳ ಪಾತ್ರವನ್ನೂ ನಿರ್ವಹಿಸಿ ಶಿಕ್ಷೆ ನೀಡಿ ಬಿಡುತ್ತಾರೆ. ಸಿಕ್ಕಿಬಿದ್ದವರು ಕಳ್ಳರೇ ಆಗಿದ್ದರೂ ಅವರಿಗೆ ಶಿಕ್ಷೆ ನೀಡುವುದಕ್ಕೆ ಬೇರೆಯೇ ವ್ಯವಸ್ಥೆ ಇರುವುದನ್ನು ಜನರ ಇಂಥ ವರ್ತನೆ ಅಲ್ಲಗಳೆದು ಬಿಡುತ್ತದೆ. ಇದು ಅರಣ್ಯನ್ಯಾಯದಂಥ ಬೆಳವಣಿಗೆ. ಇಂಥ ಘಟನೆಗಳಿಗೆ ಅವಕಾಶವಾಗುವುದು ಅರಾಜಕತೆಯ ಲಕ್ಷಣ. ಕರ್ನಾಟಕ ಇನ್ನೂ ಅಷ್ಟರಮಟ್ಟಿಗೆ ಹದಗೆಟ್ಟಿಲ್ಲ.

ಕಾನೂನನ್ನು ಕೈಗೆ ತೆಗೆದುಕೊಂಡವರು ಎಷ್ಟೇ ದೊಡ್ಡವರಾದರೂ ಅವರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದು ನಾಗರಿಕ ಸರ್ಕಾರದ ಕರ್ತವ್ಯ.

■ ಲಕ್ಷ್ಮಣ ಕೊಡಸೆ